ಸಿಸಿನಂ. 96/2022
ಪಿಡಬ್ಲ್ಯೂ: 3

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.**

ಸಿಸಿ ನಂ. 96/2022
ಪಿಡಬ್ಲೂ : 3

| | | |
|---|---|---|
| ಹೆಸರು | : | ಶ್ರೀ ಜಗದೀಶ |
| ತಂದೆಯ ಹೆಸರು | : | ಮಹಾದೇವ ಪಟಗಾರ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮಲ್ಟಿಟಾಸ್ಕಿಂಗ್ ಪೋಸ್ಟ ಸರ್ವಿಸ್ ಕಾರವಾರ ಹೆಡ್ ಪೋಸ್ಟ ಆಫೀಸ್ |
| ವಾಸ್ತವ್ಯ | : | ಊರುಕೇರಿ ತಲಗೋಡ, ಕುಮಟಾ ತಾಲೂಕ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 02-04-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ : ಪಿರ್ಯಾದುದಾರರ ಪರವಾಗಿ : ಶ್ರೀ ಎನ್ ಎಸ್ ಹೆಚ ವಕೀಲರಿಂದ :**

ನಾನು ಚಂದಾವರ ಪೋಸ್ಟ ಆಫೀಸ್ ನಲ್ಲಿ 2017 ರಿಂದ 2022 ರವರೆಗೆ ಪೋಸ್ಟಮೆನ್ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ಒಬ್ಬ ವ್ಯಕ್ತಿಗೆ ಅಂಚೆ ಇಲಾಖೆಯ ಮೂಲಕ ನೋಟಿಸನ್ನು ಕಳಿಸಿದರೆ ನಾವು ಪಾರ್ಟಿಯ ಮನೆಗೆ ಹೋಗಿ ಪಾರ್ಟಿಯ ಹೆಸರನ್ನು ಕೇಳುತ್ತೇವೆ , ಅವರು ಇದ್ದಾರೆ ಎಂದು ಮನವರಿಕೆ ಮಾಡಿಕೊಂಡು ಅವರಿಗೆ ರಜಿಸ್ಟರ್ ನ್ನು ಕೊಟ್ಟು ಬರುತ್ತೇವೆ . ರಜಿಸ್ಟರ ಕೊಟ್ಟ ನಂತರ ಅಂಚೆ ಸ್ವೀಕೃತಿ ಇದ್ದರೆ ಅದಕ್ಕೆ ಅವರ ಸಹಿಯನ್ನು ಪಡೆಯುತ್ತೇವೆ ಮತ್ತು ನಮ್ಮ ಲಿಸ್ಟಿಗೆ ಕೂಡ ಅವರ ಸಹಿಯನ್ನು ಪಡೆಯುತ್ತೇವೆ .

3. ಚಂದಾವರದಲ್ಲಿರುವ ವಿದ್ಯಾ ನಾಗೇಶ ಶೇಟ್ ಇವರ ಪರಿಚಯ ಇದೆ. ಅವರು ನೌಕರಿ ಮಾಡುತ್ತೇವೆ ಎಂದು ಹೇಳಿದ್ದರು. ವಿದ್ಯಾ ನಾಗೇಶ ಶೇಟ್ ಅವರಿಗೆ ನೋಟಿಸನ್ನು ಜಾರಿ ಮಾಡಲು ಹೋಗಿದ್ದೆ . ನಿಪಿ-5 ಇದು ಬುಕಿಂಗ್ ರಸೀದಿ. ಇದು ಯಾರು ನೋಟಿಸು ಕಳಿಸುತ್ತಾರೆ ಅವರಿಗೆ ಕೊಡುವುದು. ಅದು ಚಂದಾವರ

ಅಡ್ರೆಸ್ ನಲ್ಲಿ ಬಂದಿದ್ದು ಅಲ್ಲಿ ಪಾರ್ಟಿ ಇಲ್ಲ ಹೆಗಡೆಯಲ್ಲಿ ವಾಸ್ತವ್ಯ ಇರುತ್ತಾರೆ ಎಂದು ಖಾತ್ರಿ ಪಡಿಸಿಕೊಂಡು ನಾವು ಹೆಗಡೆಗೆ ರಿಟರ್ನ ಮಾಡಿರುತ್ತೇವೆ . ನಿಪಿ-6 ನ್ನು ಹೆಗಡೆ ಪೋಸ್ಟ ಆಫೀಸ್ ನವರು ಡೆಲಿವರಿ ಮಾಡಿರುತ್ತಾರೆ ಹಾಗೂ ಪಾರ್ಟಿಯ ಸಹಿಯನ್ನು ಪಡೆದಿರುತ್ತಾರೆ . ಅವರು ಹೆಗಡೆ ಅಡ್ರೆಸ್ ನಲ್ಲಿ ಇರುತ್ತಾರೆ ಎಂದು ನಾವು ಬರೆದು ಹಾಕುತ್ತೇವೆ . ಅದಕ್ಕೂ ಮೊದಲು ಅವರು ನನ್ನ ಮದುವೆಯಾಗಿದೆ , ವಾಸ್ತವ್ಯ ಹೆಗಡೆಯಲ್ಲಿದೆ ಎಂದು ಲೇಟರನ್ನು ಕೊಟ್ಟಿರುತ್ತಾರೆ . ನಮಗೆ ಬಂದ ಎಲ್ಲಾ ಪತ್ರಗಳನ್ನು ಹೆಗಡೆ ವಿಳಾಸಕ್ಕೆ ಕಳಿಸಿ ಎಂದು ಪತ್ರ ಕೊಟ್ಟಿರುತ್ತಾರೆ . ನಿಪಿ-6 ರಲ್ಲಿ ರೇಲ್ವೆ ಇಲಾಖೆಯಲ್ಲಿ ನೌಕರಿ , ವಾಸ್ತವ ಮತ್ತು ಪೋಸ್ಟ ಚಂದಾವರ , ತಾಲೂಕ ಹೊನ್ನಾವರ ಎಂದು ಬಂದಿತ್ತು ಎಂದರೆ ಸರಿ . ಅಂಚೆ ಲಕೋಟೆ ಮೇಲೆ ರಿಡೈರೆಕ್ಟೆಡ್ ಟು ಹೆಗಡೆ ಎಂದು ಬರೆಯುತ್ತೇವೆ . ನಾವು ಅಂಚೆ ಲಕೋಟೆಯ ಹಿಂದುಗಡೆ ಬರೆಯುತ್ತೇವೆ . ಅಂಚೆ ಲಕೋಟೆಯ ಮುಂಭಾಗದಲ್ಲಿ ಪೋಸ್ಟ ಮಾಸ್ಟರ ಬರೆಯುತ್ತಾರೆ . ನಾವು ಬರೆದರೆ ಮಾತ್ರ ಪೋಸ್ಟ ಹೆಗಡೆಗೆ ಹೋಗುತ್ತದೆ . ನಾವು ಲಕೋಟೆಯನ್ನು ಹೆಗಡೆಗೆ ಕಳಿಸಿರುತ್ತೇವೆ .

(ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.